**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019–20

ಆಯುಕ್ತರ ಕಛೇರಿ
ಅರಮನೆ ರಸ್ತೆ, ಬೆಂಗಳೂರು–56001
ದಿನಾಂಕ: 23.06.2021

**ಜ್ಞಾಪನ**

**ವಿಷಯ:** ಪ್ರಸಕ್ತ ಸಾಲಿನಲ್ಲಿ ರಾಜ್ಯದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಆಯ್ದ ಪ್ರೋಗ್ರಾಂಗಳಿಗೆ ಎನ್.ಬಿ.ಎ ಮಾನ್ಯತೆ ಪಡೆಯುವ ಬಗ್ಗೆ.

**ಉಲ್ಲೇಖ:** 1.ಈ ಕಛೇರಿ ಪತ್ರ ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019–20 ದಿನಾಂಕ: 12.05.2021

2. ಈ ಕಛೇರಿ ಪತ್ರ ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019–20 ದಿನಾಂಕ: 05.06.2021

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ(1)ಕ್ಕೆ ಸಂಬಂಧಿಸಿದಂತೆ, ಮಾನ್ಯ ಆಯುಕ್ತರ ಸೂಚನೆ ಮೇರೆಗೆ ಈಗಾಗಲೇ ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರ ಮುಖಾಂತರ ಪ್ರೋಗ್ರಾಂಗಳಿಗೆ ಸಂಬಂಧಿಸಿದ Pre-Qualifier ದತ್ತಾಂಶ ಕ್ರೋಢಿಕರಿಸಿ ಆಯಾ ಸಂಸ್ಥೆಯ ಪ್ರಾಂಶುಪಾಲರ ಶಿಫಾರಸ್ಸಿನಂತೆ ಎನ್.ಬಿ.ಎ ಮಾನ್ಯತೆ ಪಡೆಯುವಲ್ಲಿ ಪ್ರಥಮ ಆದ್ಯತೆಯುಳ್ಳ ಪ್ರೋಗ್ರಾಂಗಳಿಗೆ ಸಂಬಂಧಿಸಿದಂತೆ,ಸಂಸ್ಥೆಯ ಹಾಗೂ ಪ್ರೋಗ್ರಾಂ ಹಂತದ ಸಂಯೋಜನಾಧಿಕಾರಿಗಳಿಗೆ, ಆಯಾ ವಿಭಾಗಾ ಮುಖ್ಯಸ್ಥರುಗಳಿಗೆ ಹಾಗೂ ಅಧ್ಯಾಪಕರುಗಳಿಗೆ ಆನ್‌ಲೈನ್ ಮೂಲಕ ಎನ್.ಬಿ.ಎ ಮಾನ್ಯತೆ ಪಡೆಯುವ ನಿಮಿತ್ತ ತರಬೇತಿಯನ್ನು ನೀಡಲಾಗಿದೆ.

ಉಲ್ಲೇಖ (2)ರಂತೆ ಪ್ರಾಚಾರ್ಯರುಗಳು Internal Quality Assurance Cellನ ಮೂಲಕ ಎಲ್ಲಾ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸಿ, ಪ್ರತಿ ವಿಭಾಗದ ಕಡತಗಳ ನಿರ್ವಹಣೆಯನ್ನು ಎನ್.ಬಿ.ಎ ಮಾನದಂಡಗಳ ಪ್ರಕಾರ ಕ್ರಮವಹಿಸಲು ಈಗಾಗಲೇ ಸೂಚಿಸಿದೆ. ಅದರಂತೆ, ಆಯುಕ್ತಾಲಯದ ಎನ್.ಬಿ.ಎ ಸಂಯೋಜನಾಧಿಕಾರಿಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಿರುವ ವೇಳಾಪಟ್ಟಿಯಂತೆ ಆನ್–ಲೈನ್ ಮೂಲಕ Criterion-1ಕ್ಕೆ ಸಂಬಂಧಿಸಿದಂತೆ ದಾಖಲೆ ಪರೀಶಿಲನೆ ನಡೆಯಲಿದೆ. ತತ್ಸಂಬಂಧ ಆಯಾ ಸಂಸ್ಥೆಯ ಪ್ರಾಚಾರ್ಯರು, ವಿಭಾಗಾಧಿಕಾರಿಗಳು, ಅಧ್ಯಾಪಕರು, ಸಂಸ್ಥೆಯ ಹಾಗೂ ವಿಭಾಗೀಯ ಸಂಯೋಜಕರುಗಳು ಕಡ್ಡಾಯವಾಗಿ ಹಾಜರಿದ್ದು ಪರಿಶೀಲನೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಪ್ರಚುರಪಡಿಸಲು ನಿರ್ದೇಶಿಸಿದೆ.

| ಕ್ರ.ಸಂ. | ಸಂಸ್ಥೆ | ವಿಭಾಗ | ದಿನಾಂಕ |
|---|---|---|---|
| 1 | ಸರ್ಕಾರಿ ಎಸ್.ಕೆ.ಎಸ್.ಜೆ.ಟಿ.ಐ, ಬೆಂಗಳೂರು | ಸಿವಿಲ್ ಇಂಜಿನೀಯರಿಂಗ್ | 05.07.2021 |
| 2 | ಸರ್ಕಾರಿ ಇಂಜಿನೀಯರಿಂಗ್ ಕಾಲೇಜು, ರಾಮನಗರ | ಸಿವಿಲ್ ಇಂಜಿನೀಯರಿಂಗ್ | 06.07.2021 |
| 3 | ಸರ್ಕಾರಿ ಇಂಜಿನೀಯರಿಂಗ್ ಕಾಲೇಜು, ಹಾವೇರಿ | ಸಿವಿಲ್ ಇಂಜಿನೀಯರಿಂಗ್ | 07.07.2021 |
| 4 | ಸರ್ಕಾರಿ ಇಂಜಿನೀಯರಿಂಗ್ ಕಾಲೇಜು, ಹಾಸನ | ಮೆಕ್ಯಾನಿಕಲ್ ಇಂಜಿನೀಯರಿಂಗ್ | 08.07.2021 |

**ನಿರ್ದೇಶಕರು**

***ಸೂಚನೆ:*** *ಆನ್–ಲೈನ್ ಲಿಂಕನ್ನು ಸಂಸ್ಥೆವಾರು ತಿಳಿಸಲಾಗುವುದು*

**ಇವರಿಗೆ:**

ಸಂಬಂಧಿಸಿದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರ– ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಮಾನ್ಯ ಆಯುಕ್ತರ ಆಪ್ತ ಶಾಖೆಗೆ– ಮಾಹಿತಿಗಾಗಿ.
2. ಇ–ಗವರ್ನೆನ್ಸ ವಿಭಾಗ– ಇಲಾಖಾ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.